**ದಿನಾಂಕಃ 02.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟಿ ಸವಾಲುಃ ವಾದಿ ಪರ ಶ್ರೀ. ಜಿ.ಎಂ.ಪಿ. ವಕೀಲರಿಂದಃ**

ನಾನು ವಾಸವಾಗಿರುವ ಮನೆಯು ವಾದಿಯ ಮನೆಯಿಂದ 200 ಅಡಿ ದೂರ ಆಗುತ್ತದೆ. ವಾದಿಯು ಯಾವ ಪರಿಹಾರ ಕೋರಿ ದಾವೆ ದಾಖಲಿಸಿರುತ್ತಾರೆ ಎಂದು ಕೇಳಿ ತಿಳಿದುಕೊಂಡಿರುತ್ತೀರಾ ಅಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಖಾನೇಷುಮಾರಿ ನಂ.134. ಅದರ ವಿಸ್ತೀರ್ಣ ಮತ್ತು ಚರ್ತುಗಡಿ ಹೇಳಲು ಬರುವುದಿಲ್ಲ. 2 ನೇ ವಾದಿಯು ದಾವಾ ಆಸ್ತಿಯಿಂದ ಸುಮಾರು 25–30 ಅಡಿ ದೂರದಲ್ಲಿ ಇನ್ನೊಂದು ಖಾನೇಷುಮಾರಿನಲ್ಲಿ ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆ ಅಂದರೆ ಸರಿ. 2 ನೇ ವಾದಿಯು ಖಾನೇಷುಮಾರಿ ನಂ.8 ಇದ್ದು, ಈಗ ಖಾನೇಷುಮಾರಿ ನಂ.9 ಆಗಿದೆ ಅಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯು 2 ನೇ ವಾದಿಗೆ ಅವಳ ತಂದೆ ಲೋಕಪ್ಪ ರವರಿಂದ ಬಂದಂತಹ ಸ್ವತ್ತು ಅಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಮೂಲತಃ ಯಾರದ್ದು ಎಂದು ನನಗೆ ಗೊತ್ತಿಲ್ಲ. 2 ನೇ ವಾದಿಯ ತಂದೆಯ ತಂದೆ ಹಾಲಪ್ಪರವರನ್ನು ನಾನು ನೋಡಿರುವುದಿಲ್ಲ. ನನಗೆ ಈಗ 62 ವರ್ಷ ವಯಸ್ಸು. ವಾದಿಯ ತಂದೆ ಲೋಕಪ್ಪರವರನ್ನು ನಾನು ನೋಡಿರುತ್ತೇನೆ. ಅವರು ತೀರಿಕೊಂಡು 5–6 ವರ್ಷ ಆಗಿರಬಹುದು. ಸದರಿ ಲೋಕಪ್ಪನಿಗೆ ಅವರ ತಂದೆ ಹಾಲಪ್ಪನಿಂದ ಯಾವ ಆಸ್ತಿಯು ಹಂಚಿ ಗ್ರಾಮದಲ್ಲಿ ಇಲ್ಲ ಅಂದರೆ ನನಗೆ ಗೊತ್ತಿಲ್ಲ. ಲೋಕಪ್ಪ ಬಿಟ್ಟು ಹೋಗಿರುವ ಕೆಲವೊಂದು

ಖಾನೇಷುಮಾರಿ ಆಸ್ತಿಗಳನ್ನು ಮತ್ತು ಕೃಷಿ ಜಮೀನುಗಳನ್ನು ಅವರ ಮಕ್ಕಳು ಹಿಸ್ಸೆ ಮಾಡಿಕೊಂಡು ಅನುಭವಿಸಿಕೊಂಡು ಬಂದಿರುತ್ತಾರೆ ಅಂದರೆ ಸರಿ. ಲೋಕಪ್ಪ ಬಿಟ್ಟು ಹೋಗಿರುವ ಎಲ್ಲಾ ಆಸ್ತಿಗಳನ್ನು ವೀರಭದ್ರಪ್ಪ ಎನ್ನುವವರು ನೊಂದಾಯಿತ ವ್ಯವಸ್ಥಾ ಪತ್ರವನ್ನು ಲೋಕಪ್ಪನ ಹೆಸರಿಗೆ ಬರೆದುಕೊಟ್ಟಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಮೂಲ ಪ್ರತಿವಾದಿ ಈರಜಮ್ಮ ರವರನ್ನು ನಾನು ನೋಡಿರುತ್ತೇನೆ. ಅವರು ತೀರಿಕೊಂಡು ಈಗ 2–3 ವರ್ಷ ಆಗಿರಬಹುದು. ಅವರು ಮೂಲತಃ ಹಂಚಿ ಗ್ರಾಮದವರು. ಅವರ ತಂದೆಯ ಹೆಸರು ವೀರಬಸಪ್ಪ ಅಂದರೆ ಸರಿ. ಸದರಿ ವೀರಬಸಪ್ಪ ರವರನ್ನು ನಾನು ನೋಡಿರುವುದಿಲ್ಲ ಹಾಗೂ ಅವರು ಎಷ್ಟು ವರ್ಷಗಳ ಹಿಂದೆ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ವೀರಬಸಪ್ಪ ರವರು ಬಿಟ್ಟು ಹೋಗಿರುವ ಆಸ್ತಿಗಳನ್ನು ಮೃತ ಈರಜಮ್ಮ ಒಬ್ಬಳೇ ಅನುಭವಿಸಿಕೊಂಡು ಬಂದಿರುತ್ತಾಳೆ ಅಂದರೆ ಸರಿ. ವೀರಬಸಪ್ಪ ಮತ್ತು ವೀರಭದ್ರಪ್ಪ ಖಾಸ ಅಣ್ಣ–ತಮ್ಮಂದಿರು ಅಂದರೆ ಸರಿ. ಅವರ ಮಧ್ಯೆ ಬಹಳ ವರ್ಷಗಳ ಹಿಂದೆ ಹಿಸ್ಸೆ ಆಗಿದ್ದ ವಿಷಯ ಗೊತ್ತಿದಿಯಾ ಅಂದರೆ ಇಲ್ಲ. ಹಾಗೆ ಆಗಿರುವ ಹಿಸ್ಸೆಯಲ್ಲಿ ದಾವಾ ಆಸ್ತಿಯು ವೀರಭದ್ರಪ್ಪ ರವರ ಹೆಸರಿಗೆ ಬಂದಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ವ್ಯವಸ್ಥಾ ಪತ್ರದ ಮೂಲಕ ದಾವಾ ಆಸ್ತಿಯನ್ನು ವಾದಿಯ ತಂದೆ ಲೋಕಪ್ಪನವರಿಗೆ ನೀಡಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಲೋಕಪ್ಪ ತೀರಿಕೊಂಡ ನಂತರ ಅವರ ಮಕ್ಕಳ ಮಧ್ಯೆ ಹಿಸ್ಸೆ ದಾವೆ ಆಗಿದ್ದು ಸಹ ನನಗೆ ಗೊತ್ತಿಲ್ಲ. ಸದರಿ ಹಿಸ್ಸೆಯಲ್ಲಿ ಆದಂತಹ ಆದೇಶದಂತೆ ದಾವಾ ಆಸ್ತಿಯು

2 ನೇ ವಾದಿಯ ಹಿಸ್ಸೆಗೆ ಬಂದಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ನಾನು ಮತ್ತು 1(ಎ) ಪ್ರತಿವಾದಿಯವರು ಬಹಳ ವಿಶ್ವಾಸಿಕರು ಅಂದರೆ ಸರಿ. ಆ ಕಾರಣ ದಾವಾ ಆಸ್ತಿಯು ಪ್ರತಿವಾದಿಯವರ ಸ್ವಾಧೀನಾನುಭದಲ್ಲಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಅಂದರೆ ಸರಿಯಲ್ಲ. ಸ್ಥಳದಲ್ಲಿ ಭೌತಿಕ ವಾದಿಯು ಸ್ವಾಧೀನಾನುಭವದಲ್ಲಿದ್ದರೂ ಸಹ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ. ವಾದಿ ಮತ್ತು ಮೃತ ಈರಜಮ್ಮ ರವರ ಕುಟುಂಬದಲ್ಲಿ ಸುಮಾರು 70 ವರ್ಷಗಳ ಹಿಂದೆ ಆದಂತಹ ವ್ಯವಸ್ಥಾ ಪತ್ರದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಅಂದರೆ ಸರಿ. 1(ಎ) ಪ್ರತಿವಾದಿಯವರು ಮದುವೆ ಆಗಿ ಹಂಚಿ ಗ್ರಾಮದಲ್ಲಿ ವಾಸವಾಗಿರುತ್ತಾರೆ ಅಂದರೆ ಸರಿ. ಅವರು ಸ್ವಂತ ಊರು ಹಂಚಿ ಗ್ರಾಮ ಅಲ್ಲ ಅಂದರೆ ಸರಿ. ಆ ಕಾರಣ ಅವರ ವಿವಾಹ ಪೂರ್ವದಲ್ಲಿ ಕುಟುಂಬದಲ್ಲಿ ಆದಂತಹ ವ್ಯವಸ್ಥಾ ಪತ್ರದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಅಂದರೆ ಸರಿ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**